52

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ ಹಾಗೂ ಶ್ರೀ ಕಾಂತರಾಜ್ (ಬಿಎಂಎಲ್) ಇವರ ನಿಯಮ 72 ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:52 ಕ್ಕೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ.**

ವಿಷಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತದ ಕೇಂದ್ರ ಕಚೇರಿಯನ್ನು ಬೆಂಗಳೂರು ನಾಗರ ಭಾವಿಯಲ್ಲಿ ನಿರ್ಮಾಣ ಮಾಡುತ್ತಿದ್ದು, ಈ ಕಾಮಗಾರಿಯ ಮೊತ್ತ ಸುಮಾರು 80 ಕೋಟಿ ಆಗಿರುವ ವಿಷಯದ ಬಗ್ಗೆ.

*****

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತದ ಕೇಂದ್ರ ಕಛೇರಿಯನ್ನು ಬೆಂಗಳೂರು ನಾಗರಭಾವಿಯಲ್ಲಿ ನಿರ್ಮಾಣ ಮಾಡುತ್ತಿದ್ದು, ಈ ಕಾಮಗಾರಿಯ ಮೊತ್ತವು ರೂ.50 ಕೋಟಿ ಆಗಿರುತ್ತದೆ. ಕರ್ನಾಟಕ ಸರ್ಕಾರದ ಕೆ.ಟಿ.ಪಿ.ಪಿ ಟೆಂಡರ್ ನಿಯಮಾವಳಿಯಂತೆ e-procurement portal ನಲ್ಲಿ ಟೆಂಡರ್‌ನ್ನು ಕರೆಯಲಾಗಿರುತ್ತದೆ. ಸದರಿ ಕಾಮಗಾರಿಯ ಕಾರ್ಯಗಳನ್ನು ನಿರ್ವಹಿಸಲು ಸಿವಿಲ್ ಕಾರ್ಯನಿರ್ವಾಹಕ ಇಂಜಿನಿಯರ್ ರವರನ್ನು ಕೆ.ಪಿ.ಟಿ.ಸಿ.ಎಲ್ ಸಂಸ್ಥೆಯಿಂದ ನಿಯೋಜನೆಯ ಮೇಲೆ ಪಡೆಯಲಾಗಿದೆ ಮತ್ತು ಕಾಮಗಾರಿಯ ನಕ್ಷೆಯನ್ನು ಮತ್ತು ನಿರ್ವಹಣೆಯ ಕಾರ್ಯವನ್ನು M/s. Wadia Techno Engineers ಸಂಸ್ಥೆ (3rd Party)ಗೆ ವಹಿಸಲಾಗಿದೆ. ಸಂಪೂರ್ಣ ಕಾಮಗಾರಿಯ ಕಾರ್ಯಗಳನ್ನು ಸಿವಿಲ್ ಸಿಬ್ಬಂದಿ ಮತ್ತು ಸಿವಿಲ್ Consultant ಮತ್ತು Architect ರವರ ಮೂಲಕ ಕೈಗೊಳ್ಳಲಾಗಿದೆ. ಲೆಕ್ಕ ವಿಭಾಗದಿಂದ ಕಾಮಗಾರಿಯ ಕೆಲಸವನ್ನು ಅನುಷ್ಠಾನಗೊಳಿಸಿರುವುದಿಲ್ಲ.

ಸದರಿ ಕಾಮಗಾರಿಯನ್ನು ನಿಗಮವು ನುರಿತ ತಾಂತ್ರಿಕ ಸಿಬ್ಬಂದಿ ಮತ್ತು ತಾಂತ್ರಿಕ ಕೌಶಲ್ಯವುಳ್ಳ ಹಾಗೂ ನಿಯಮಾನುಸಾರ ಆಯ್ಕೆ ಮಾಡಲಾದ Project Management Consultants ಸಂಸ್ಥೆಯಾದ M/s. Wadia Techno Engineers ರವರ ಮೇಲ್ವಿಚಾರಣೆಯಲ್ಲಿ ನಡೆಸಲಾಗುತ್ತಿದೆ. ಇದಕ್ಕೆ ಸರ್ಕಾರದಿಂದ ರೂ.49.97 ಕೋಟಿಗಳ ಟೆಂಡರ್‌ಗೆ ಅನುಮೋದನೆ ಪಡೆಯಲಾಗಿದೆ. ಸದರಿ ಕಾಮಗಾರಿಯನ್ನು e-procurement ನ ಮೂಲಕ ಕೆ.ಟಿ.ಪಿ.ಪಿ ನಿಯಮಾವಳಿಗಳಂತೆ ಟೆಂಡರ್ ಕರೆಯಲಾಗಿದ್ದು, M/s. Hombale Constructions and Estate Private Ltd (L1-Bidder) ರವರಿಗೆ ವಹಿಸಲಾಗಿದ್ದು, ಈವರೆಗೆ ರೂ.46.06 ಕೋಟಿಗಳ ಮೊತ್ತವು ಪಾವತಿಯಾಗಿರುತ್ತದೆ. M/s. Wadia Techno Engineers ರವರ ತಾಂತ್ರಿಕ ಸಿಬ್ಬಂದಿಗಳಾದ Senior Artchitect, Project Engineer for Civil, Site Engineers for Civil, Electricial Mechanical ರವರುಗಳು ಪರಿಶೀಲಿಸಿ ನಂತರ ಕಾರ್ಯನಿರ್ವಾಹಕ ಇಂಜಿನಿಯರ್ - ಸಿವಿಲ್ ರವರ ದೃಢೀಕರಣದೊಂದಿಗೆ ಪಾವತಿ ಮಾಡಲಾಗಿದೆ. ಸದರಿ ಕಾಮಗಾರಿಗೆ ಮೂರನೇ ವ್ಯಕ್ತಿಯ ತಪಾಸಣಾ ಸಂಸ್ಥೆ ಹಾಗೂ Project Management Consultants ಆಗಿರುವ M/s. Wadia Techno Engineer ರವರಿಗೆ ವಹಿಸಲಾಗಿದೆ. ಸಂಪೂರ್ಣ ಕಾಮಗಾರಿಯನ್ನು ಸರ್ಕಾರದ ನಿಯಮಾನುಸಾರ ಗುಣಮಟ್ಟಕ್ಕೆ ಆದ್ಯತೆ ಕೊಟ್ಟು ಮಾಡಲಾಗಿದೆ. ಸದರಿ ಕಟ್ಟಡದ ಕಾಮಗಾರಿಯ ಕೆಲಸಗಳನ್ನು ನಿರ್ವಹಿಸಲು ಕಾರ್ಯನಿರ್ವಾಹಕ ಇಂಜಿನಿಯರ್ ಮಟ್ಟದ ಸಿವಿಲ್ ಅಭಿಯಂತರರನ್ನು ಕೆಪಿಟಿಸಿಎಲ್ ನಿಂದ ನಿಯೋಜನೆ ಮೇಲೆ ಪಡೆಯಲಾಗಿದ್ದು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸದರಿ ಕಟ್ಟಡದ ಗುಣಮಟ್ಟದ ಕಾಮಗಾರಿ ಕಾರ್ಯಗಳನ್ನು ಖಾತ್ರಿಪಡಿಸಲು ಸಮರ್ಥವಾಗಿರುತ್ತದೆ.

ಸಂಖ್ಯೆ: ಎನರ್ಜಿ 33 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ